DITTO WS

Reg. No. : .....................................

Name : ..........................................

# FY-216

## FIRST YEAR HIGHER SECONDARY EXAMINATION, SEPTEMBER 2021

Part – III

**KANNADA (Optional)**

Maximum : 80 Scores

Time : **2½** Hours

Cool-off time : **20** Minutes

**ವಿದ್ಯಾರ್ಥಿಗಳಿಗೆ ಸೂಚನೆಗಳು :**

- ಮೊದಲ **20** ನಿಮಿಷ 'ಕೂಲ್ ಆಫ್ ಸಮಯ' ವಾಗಿದೆ. ಪ್ರಶ್ನೆಗಳನ್ನು ಓದಿ ಅರ್ಥೈಸಿಕೊಳ್ಳುವುದಕ್ಕೂ ಉತ್ತರಗಳ ಬಗ್ಗೆ ಯೋಚಿಸುವುದಕ್ಕೂ ಈ ಸಮಯವನ್ನು ಬಳಸಿಕೊಳ್ಳಬಹುದು.
- ಪ್ರಶ್ನೆಗಳನ್ನು ಮತ್ತು ಸೂಚನೆಗಳನ್ನು ಸರಿಯಾಗಿ ಓದಿ ಅರ್ಥೈಸಿಕೊಂಡ ಮೇಲೆ ಉತ್ತರ ಬರೆಯಿರಿ.
- ಉತ್ತರ ಬರೆಯುವಾಗ ಅಂಕ, ಸಮಯ ಮೊದಲಾದವುಗಳನ್ನು ಪರಿಗಣಿಸಬೇಕು.
- ಒಟ್ಟು **43** ಪ್ರಶ್ನೆಗಳನ್ನು ಕೊಡಲಾಗಿದೆ.

**1 ರಿಂದ 4 ರ ವರೆಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆವರಣದಿಂದ ಆರಿಸಿ ಬರೆಯಿರಿ.** **(4 × 1 = 4)**

1. ದಯೆಯೇ ಧರ್ಮದ ಮೂಲವಯ್ಯ – ಇದು ಯಾರ ವಚನವಾಗಿದೆ ?
   (ಜೇಡರ ದಾಸಿಮಯ್ಯ, ಬಸವಣ್ಣ, ಅಕ್ಕಮಹಾದೇವಿ, ಎಸ್.ವಿ. ಪರಮೇಶ್ವರ ಭಟ್ಟ)

2. ಕುಪಿತತನವನು ಬಿಡದೆ ನಿರಂತರ ಏನನ್ನು ಮಾಡಿದರೆ ಫಲವಿಲ್ಲ ?
   (ನಟನೆಯನು, ಸ್ನಾನವನು, ತಪವನು, ಯಾತ್ರೆಯನು)

3. ಮಳೆಯ ದಯ ಮಾಡೊ – ಈ ಪಾಠವು ಯಾವ ಕಾವ್ಯ ಪ್ರಕಾರಕ್ಕೆ ಸೇರುತ್ತದೆ ?
   (ವಚನ, ಜನಪದ ಗೀತೆ, ಕೀರ್ತನೆ, ಸಾಂಗತ್ಯ)

4. ಯಾರು ಹೇಳಿದ ಮಾತಿನಿಂದಾಗಿ ನಾದಿರಾಳ ಬದುಕಿನ ದಿಕ್ಕು ಬದಲಾಯಿತು ?
   (ಗಂಡ, ಅತ್ತೆ, ತಾಯಿ, ತಂದೆ)

**5 ರಿಂದ 12 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿರಿ.** **(4 × 1 = 4)**

5. ಕಳವೆ – ಈ ಪದದ ಅರ್ಥವನ್ನು ಬರೆಯಿರಿ.

6. ಇರುಳು – ಈ ಪದದ ಎರಡು ಪರ್ಯಾಯ ಪದಗಳನ್ನು ಬರೆಯಿರಿ.

7. ಮಾರ್ತಂಡನುದಯಿಸಿದಂ – ಈ ಪದವನ್ನು ವಿಂಗಡಿಸಿ ಬರೆಯಿರಿ.

DITTO WS

8. ಮುಖ – ಈ ಪದದ ತದ್ಭವ ರೂಪವನ್ನು ಬರೆಯಿರಿ.

9. ಕರುಣೆ – ಈ ಪದದ ಭಾವನಾಮ ರೂಪವನ್ನು ಬರೆಯಿರಿ.

10. ತಲೆದೂಗು – ಈ ಪದವನ್ನು ಬಳಸಿಕೊಂಡು ಸ್ವಂತ ವಾಕ್ಯವೊಂದನ್ನು ರಚಿಸಿರಿ.

11. ಮಕ್ಕಳೆಲ್ಲ ಕ್ಲಾಸ್ ನೋಡಿ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. – ಈ ವಾಕ್ಯದಲ್ಲಿ ಬಳಸಿರುವ ಅನ್ಯದೇಶಿಯ ಪದವನ್ನು ಗುರುತಿಸಿ ಬರೆಯಿರಿ.

12. ನಾನು ಶಾಲೆಗೆ ಹೋಗುವೆನು – ಈ ವಾಕ್ಯವನ್ನು ಭೂತಕಾಲಕ್ಕೆ ಪರಿವರ್ತಿಸಿರಿ.

**13 ರಿಂದ 18 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. (3 × 3 = 9)**

13. ಕೆಳಗೆ ಕೊಡಲಾದ ಮಿಶ್ರವಾಕ್ಯವನ್ನು ಮೂರು ಸರಳವಾಕ್ಯಗಳಾಗಿ ಬರೆಯಿರಿ.
ನಾದಿರಾಳು ದೋಣಿಯಲ್ಲಿ ಕುಳಿತು ತನ್ನ ಪ್ರೀತಿಯ ಚಂದ್ರಗಿರಿಯನ್ನು ನೋಡಿ ಸಂತೋಷಪಡುತ್ತಾ ಆಯಾಸವನ್ನು ಮರೆತಳು.

14. ಕೆಳಗೆ ಕೊಡಲಾದ ಕೀರ್ತನೆಯ ಸಾಲುಗಳ ಸ್ವಾರಸ್ಯವನ್ನು ಬರೆಯಿರಿ.
ಮಾತಾಪಿತರನು ಬಳಲಿಸಿದಾತನು
ಯಾತ್ರೆಯ ಮಾಡಿದರೇನು ಫಲ
ಘಾತಕತನವನು ಬಿಡದೆ ನಿರಂತರ
ಗೀತೆಯನೋದಿದರೇನು ಫಲ

15. ಬರತಾಳಂತ, ಭೇದಿಲ್ಲ, ಮಗಳಂಗ, ಸೌದಿಲ್ಲ, ಬೈಬ್ಯಾಡ, ಕೊಡಬ್ಯಾಡ – ಈ ಗ್ರಾಮ್ಯ ಪದಗಳ ಶಿಷ್ಟರೂಪವನ್ನು ಬರೆಯಿರಿ.

16. ನಮ್ಮ ಮಾತುಗಳು ಹೇಗಿರಬೇಕೆಂದು ಬಸವಣ್ಣನವರು ತಿಳಿಸಿದ್ದಾರೆ ?

17. ಬುದ್ಧನು ಆನಂದನಲ್ಲಿ ನೀರನ್ನು ಕೇಳಿದಾಗ ಆತನ ಪ್ರತಿಕ್ರಿಯೆ ಏನಾಗಿತ್ತು ? ವಿಶದಪಡಿಸಿರಿ.

18. ಕೆಳಗೆ ಕೊಟ್ಟ ಗಾದೆ ಮಾತಿನ ಆಶಯವನ್ನು ವಿಸ್ತರಿಸಿ ಬರೆಯಿರಿ.
ಬೆಳ್ಳಗಿರುವುದೆಲ್ಲಾ ಹಾಲಲ್ಲ

**19 ರಿಂದ 25 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. (3 × 4 = 12)**

19.

| 'ಅ' ವಿಭಾಗ | 'ಆ' ವಿಭಾಗ |
|---|---|
| ಕೆ.ವಿ. ತಿರುಮಲೇಶ್ | ಅಶ್ವತ್ಥಾಮ |
| ಸು.ರಂ. ಎಕ್ಕುಂಡಿ | ಪೆಂಟಯ್ಯನ ಅಂಗಿ |
| ಸಾರಾ ಅಬೂಬಕ್ಕರ್ | ಬೇವು ಬೆಲ್ಲದೊಳಿಡಲೇನು ಫಲ |
| ಪುರಂದರದಾಸ | ಚಂದ್ರಗಿರಿಯ ತೀರದಲ್ಲಿ |

20. “ಪ್ರಕೃತಿಯೆಲ್ಲವೂ ಭಗವಂತನ ಅನುಗ್ರಹ” ಎಂಬುವುದನ್ನು ಜೇಡರ ದಾಸಿಮಯ್ಯನು ಸಮರ್ಥಿಸಿದ ಬಗೆಯನ್ನು ತಿಳಿಸಿರಿ.

21. ‘ಬಡವನಿಗೆ ಸಾವ ಕೊಡಬ್ಯಾಡ’ – ಈ ಮಾತನ್ನು ಜನಪದ ಗೀತೆಯಲ್ಲಿ ಸ್ಪಷ್ಟಪಡಿಸಿದ ಬಗೆಯನ್ನು ತಿಳಿಸಿರಿ.

22. ಕನಸಿನ ಗೋಪುರ ಕಟ್ಟಿಕೊಂಡು ಅಡವಿರಾಮುಡು ಸಿನಿಮಾ ನೋಡಲು ಹೋದ ಪೆಂಟಯ್ಯನ ಮನಸ್ಸಿನ ಭಾವನೆಗಳ ಕುರಿತು ಕಿರುಟಿಪ್ಪಣಿ ಬರೆಯಿರಿ.

23. ನಿರ್ಮಲವಾದ ಭಕ್ತಿಗೆ ನಿರ್ದಿಷ್ಟವಾದ ಸ್ವರೂಪವಿಲ್ಲ ಎಂಬುವುದನ್ನು ಎಸ್.ವಿ. ಪರಮೇಶ್ವರ ಭಟ್ಟರು ಸ್ಪಷ್ಟಪಡಿಸಿದ ಬಗೆಯನ್ನು ತಿಳಿಸಿರಿ.

24. ತಲೆಮಾರುಗಳ ಅಂತರದಲ್ಲಿ ಕಂಡುಬರುವ ಬದಲಾವಣೆಗಳನ್ನು ‘ಬೆಳಸು’ ಕವಿತೆಯು ಧ್ವನಿಸುತ್ತಿದೆಯೇ ? – ನಿಮ್ಮ ಅನಿಸಿಕೆಗಳೊಂದಿಗೆ ಸಮರ್ಥಿಸಿ ಬರೆಯಿರಿ.

25. ತಾಳ ಮದ್ದಲೆಯ ಕುರಿತು ಕಿರುಟಿಪ್ಪಣಿ ಬರೆಯಿರಿ.

**26 ರಿಂದ 39 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಏಳು ಪ್ರಶ್ನೆಗಳಿಗೆ ಅರ್ಧಪುಟಕ್ಕೆ ಕಡಿಮೆಯಾಗದಂತೆ ಉತ್ತರ ಬರೆಯಿರಿ.** **(7 × 5 = 35)**

26. ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕಾದ ಗುಣನಡತೆಗಳ ಬಗ್ಗೆ ನೀವು ಅಭ್ಯಾಸ ಮಾಡಿದ ವಚನಗಳ ಆಧಾರದಲ್ಲಿ ವಿವರಿಸಿರಿ.

27. ‘ಕಣ್ಣ ಮುಂದೈತೆ ಕೈಲಾಸ’ – ಜನಪದ ತ್ರಿಪದಿಗಳಲ್ಲಿ ವ್ಯಕ್ತವಾಗುವ ಆಶಯವನ್ನು ಬರೆಯಿರಿ.

28. ಬುದ್ಧನ ಮಹಾನುಭಾವತೆ ‘ವೈಶಾಖ ಪೂರ್ಣಮಿಯ ಮಾರ್ತಂಡನುದಯಿಸಿದಂ’ ಕಾವ್ಯಭಾಗದಲ್ಲಿ ವ್ಯಕ್ತವಾದ ರೀತಿಯನ್ನು ವಿವರಿಸಿರಿ.

29. ಹಾಲನ್ನು ಬಯಸಿದ ಮಗನಿಗೆ ಹಾಲನ್ನು ನೀಡಲಾಗದೆ ಅಸಹಾಯಕರಾದ ಹೆತ್ತವರ ದೀನಸ್ಥಿತಿ ‘ಅಶ್ವತ್ಥಾಮ’ ಕವಿತೆಯಲ್ಲಿ ನಿರೂಪಿತವಾಗಿದೆಯಲ್ಲವೆ ? ಅದನ್ನು ವಿವರಿಸಿರಿ.

30. ‘ಬಾಶಿಂಗ ಬಲ’ ಕಥೆಯಲ್ಲಿ ಮೂಡಿಬಂದಿರುವ ಮಲಕಾಜಿಯ ಪಾತ್ರಚಿತ್ರಣ ಮಾಡಿರಿ.

31. ದುಡಿಮೆಯ ಯಾಂತ್ರಿಕತೆಯಿಂದ ಬಿಡುಗಡೆಗೊಳ್ಳಲು ತುಡಿಯುವ ಮನಸ್ಸು ಪೆಂಟಯ್ಯನ ಪಾತ್ರದ ಮೂಲಕ ವ್ಯಕ್ತವಾದ ಬಗೆಯನ್ನು ಬರೆಯಿರಿ.

32. ಮಳೆಯ ಸುಳಿವೇ ಕಾಣದಿದ್ದಾಗ ಮಳೆಗಾಗಿ ಪ್ರಾರ್ಥಿಸುವ ಸನ್ನಿವೇಶ 'ಮಳೆಯ ದಯಮಾಡೊ' ಕೀರ್ತನೆಯಲ್ಲಿ ಹೊರಹೊಮ್ಮಿದೆಯಲ್ಲವೆ ? ವಿವರಿಸಿ ಬರೆಯಿರಿ.

33. 'ಬೇವು ಬೆಲ್ಲದೊಳಿಡಲೇನು ಫಲ' ಕೀರ್ತನೆಯ ಆಶಯವನ್ನು ಬರೆಯಿರಿ.

34. 'ಚಂದ್ರಗಿರಿಯ ತೀರದಲ್ಲಿ' ಈ ಪಾಠದಲ್ಲಿ ಬರುವ ನಾದಿರಾಳ ಪಾತ್ರಚಿತ್ರಣ ಮಾಡಿರಿ.

35. ಉತ್ರಾಜಿಯ ಜೀವನ ದುರಂತಮಯ ವಾಗಲು ಕಾರಣವೇನು ? ವಿವರಿಸಿರಿ.

36. 'ಮೊದಲಗಿತ್ತಿ' ಕವಿತೆಯ ಆಶಯವನ್ನು ಬರೆಯಿರಿ.

37. ಕನ್ನಡ ಭಾಷೆ ಮತ್ತು ಸಾಹಿತ್ಯದ ಕುರಿತು ಸಂಕ್ಷಿಪ್ತವಾದ ಕಿರು ಪರಿಚಯವನ್ನು ಕೊಡಿರಿ.

38. ಚಂದ್ರಗುಪ್ತನ ಜಾಣ್ಮೆ, ಸಾಹಸಗಳು 'ಪಂಜರ ಪರೀಕ್ಷೆ' ಪಾಠದಲ್ಲಿ ವ್ಯಕ್ತವಾದ ಬಗೆಯನ್ನು ವಿವರಿಸಿರಿ.

39. ನಿಮ್ಮ ಊರಿನ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸಲು ಸಂಬಂಧಪಟ್ಟ ಅಧಿಕಾರಿಗಳ ಗಮನ ಸೆಳೆಯುವುದಕ್ಕಾಗಿ ಮನವಿಪತ್ರವೊಂದನ್ನು ಸಿದ್ಧಪಡಿಸಿರಿ.

**40 ರಿಂದ 43 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಒಂದು ಪುಟಕ್ಕೆ ಕಡಿಮೆಯಾಗದಂತೆ ಉತ್ತರ ಬರೆಯಿರಿ.** **($2 \times 8 = 16$)**

40. 'ಮಾತು ಮನೆ ಕೆಡಿಸಿತು' – ಈ ಮಾತು 'ಚಂದ್ರಗಿರಿಯ ತೀರದಲ್ಲಿ' ಕಾದಂಬರಿಗೆ ಅನ್ವಯವಾಗುತ್ತಿದೆಯೇ ? ನಿಮ್ಮ ಮಾತುಗಳೊಂದಿಗೆ ಸಮರ್ಥಿಸಿ ಬರೆಯಿರಿ.

41. ಹಳ್ಳಿಯ ಜನರ ಮುಗ್ದತೆಯು 'ಬಾಶಿಂಗಬಲ' ಕಥೆಯಲ್ಲಿ ಪ್ರಕಟಗೊಂಡ ಬಗೆಯನ್ನು ವಿವರಿಸಿರಿ.

42. 'ಹೇಮಕೂಟದಿಂದ ಬಂದ ಮೇಲೆ' ಈ ಪಾಠದಲ್ಲಿ ಮೂಡಿ ಬಂದಿರುವ ಶಕುಂತಲೆಯ ಪಾತ್ರಚಿತ್ರಣವನ್ನು ಮಾಡಿರಿ.

43. ನಮ್ಮ ಪರಿಸರವು ಅನೇಕ ಕಾರಣಗಳಿಂದ ಮಲೀನವಾಗುತ್ತಿದೆ. ಅದನ್ನು ತಡೆಗಟ್ಟುವುದು ನಮ್ಮೆಲ್ಲರ ಕರ್ತವ್ಯವಲ್ಲವೆ ? ಪರಿಸರ ಮಾಲಿನ್ಯಕ್ಕೆ ಕಾರಣವಾಗುತ್ತಿರುವ ವಿಷಯಗಳನ್ನು ಬರೆದು ಅದರ ಪರಿಹಾರೋಪಾಯಗಳನ್ನು ಪ್ರಬಂಧ ರೂಪದಲ್ಲಿ ಬರೆಯಿರಿ.

---